# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ತಾಂತ್ರಿಕ ವಿಭಾಗ/ಟಿ.ಎನ್.06/2008–09 ದಿನಾಂಕ:17–06–2008

## –:: ವಾರ್ಷಿಕ ಟೆಂಡರ್ ಪ್ರಕಟಣೆ ::–

ದೊಡ್ಡಬಳ್ಳಾಪುರ ನಗರಸಭೆ ನೀರು ಸರಬರಾಜು ವಿಭಾಗಕ್ಕೆ ಸಂಬಂಧಿಸಿದಂತೆ ನಗರಸಭಾ ನಿಧಿ ಹಾಗೂ ಇತರೆ ಸರ್ಕಾರದ ಅನುದಾನಗಳಿಗೆ 2008–09ನೇ ಸಾಲಿಗೆ ಈ ಕೆಳಕಂಡ ಕಾಮಗಾರಿಗಳಿಗೆ ನೀರುಸರಬರಾಜು ಸಾಮಗ್ರಿಗಳನ್ನು ಸರಬರಾಜು ಮಾಡಲು ವಾರ್ಷಿಕ ಟೆಂಡರ್ ಪ್ರಕಟಣೆ ನೀಡಿದ್ದು,ಅರ್ಹ ಅಧಿಕೃತ ಗುತ್ತಿಗೆದಾರರು/ಸರಬರಾಜುದಾರರಿಂದ ದ್ವಿಪ್ರತಿಯಲ್ಲಿ ಐಟಂವಾರು / ಶೇಕಡವಾರು ಟೆಂಡರ್‌ನ್ನು ಆಹ್ವಾನಿಸಿದೆ.

| ಕ್ರ. ಸಂ. | ಕಾಮಗಾರಿ ಹೆಸರು | ಇ.ಎಂ.ಡಿ ಮೊತ್ತ ರೂ.ಗಳಲ್ಲಿ | ಟೆಂಡರ್ ಫಾರಂ ಬೆಲೆ ರೂ. ಗಳಲ್ಲಿ | ಕಾಲಾವಧಿ | ಅರ್ಜಿ ಸಲ್ಲಿಸುವ ದಿನಾಂಕ | ಖಾಲಿ ಟೆಂಡರ್ ಫಾರಂ ನೀಡುವ ದಿನಾಂಕ | ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ |
|---|---|---|---|---|---|---|---|
| 1 | ನೀರು ಸರಬರಾಜು ಸಾಮಗ್ರಿಗಳನ್ನು ಪೂರೈಸುವುದು. | 30,000.00 | 1200+ತೆರಿಗೆ | 1 ವರ್ಷ | 19–06–2008 ರಿಂದ 02–07–2008ರ ವರೆಗೆ | 03–07–2008 ರಿಂದ 10–07–2008ರ ವರೆಗೆ | 19–07–2008ರ ಸಂಜೆ 4.00ಗಂಟೆ ವರೆಗೆ |
| 2 | ನೀರು ಸರಬರಾಜು ವಿಭಾಗದ ಪೈಪ್‌ಲೈನ್ ಮಣ್ಣು ಅಗೆತ,ದುರಸ್ಥಿ ಮತ್ತು ಇತ್ಯಾದಿ ಕಾಮಗಾರಿ | | | | | | |
| | ಅ) ವಾರ್ಡ್ ನಂ. 1 ರಿಂದ 15ರ ವರೆಗೆ | 6,250.00 | 500+ತೆರಿಗೆ | 1 ವರ್ಷ | 19–06–2008 ರಿಂದ 02–07–2008ರ ವರೆಗೆ | 03–07–2008 ರಿಂದ 10–07–2008ರ ವರೆಗೆ | 19–07–2008ರ ಸಂಜೆ 4.00ಗಂಟೆ ವರೆಗೆ |
| | ಆ) ವಾರ್ಡ್ ನಂ.16 ರಿಂದ 31ರ ವರೆಗೆ | 6,250.00 | 500+ತೆರಿಗೆ | 1 ವರ್ಷ | 19–06–2008 ರಿಂದ 02–07–2008ರ ವರೆಗೆ | 03–07–2008 ರಿಂದ 10–07–2008ರ ವರೆಗೆ | 19–07–2008ರ ಸಂಜೆ 4.00ಗಂಟೆ ವರೆಗೆ |
| 3 | ನೀರು ಸರಬರಾಜು ವಿಭಾಗದ ಕೊಳವೆ ಬಾವಿಗಳ ವಿವಿಧ ಪವರ್ ಪಂಪ್ಸ್, ಕಂಟ್ರೋಲ್ ಪ್ಯಾನಲ್ ಮತ್ತು ಇತ್ಯಾದಿ ರಿಪೇರಿ ಕೆಲಸ | 10,000.00 | 500+ತೆರಿಗೆ | 1 ವರ್ಷ | 19–06–2008 ರಿಂದ 02–07–2008ರ ವರೆಗೆ | 03–07–2008 ರಿಂದ 10–07–2008ರ ವರೆಗೆ | 19–07–2008ರ ಸಂಜೆ 4.00ಗಂಟೆ ವರೆಗೆ |

<u>ಷರತ್ತುಗಳು ಮೇಲಿನ ಕಾಮಗಾರಿಗಳಿಗೆ ಅನ್ವಯಿಸುವಂತೆ:</u>

1) ಖಾಲಿ ಟೆಂಡರ್ ಫಾರಂಗಾಗಿ ಮನವಿ ಸಲ್ಲಿಸುವಾಗ ಟೆಂಡರ್ ಫಾರಂ ಬೆಲೆ ಮತ್ತು ಇ.ಎಂ.ಡಿ. ಹಣವನ್ನು ಡಿ.ಡಿ.ಅಥವಾ ಕಛೇರಿಯಲ್ಲಿ ನಗದು ಪಾವತಿಸಿದ ರಸೀದಿಯೊಂದಿಗೆ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಕಟ್ಟುವುದು, ಹಾಗೂ ಖಾಲಿ ಟೆಂಡರ್ ಫಾರಂಗೆ ಕಟ್ಟಿದ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
2) ಪಿ.ಡಬ್ಲ್ಯೂ.ಡಿ 65(ಎ) ಮತ್ತು 66ರ ಷರತ್ತುಗಳನ್ನು ಪಾಲಿಸತಕ್ಕದ್ದು.
3) ಈ ಮೇಲಿನ ಕಾಮಗಾರಿಗಳಿಗೆ ಟೆಂಡರ್‌ದಾರರು ಕನಿಷ್ಠ 1ವರ್ಷ ಅದೇ ರೀತಿ ಕೆಲಸದಲ್ಲಿ ಅನುಭವವಿರಬೇಕು.
4) ಖಾಲಿ ಅರ್ಜಿ ಫಾರಂಗಳಿಗಾಗಿ ಅರ್ಜಿ ಸಲ್ಲಿಸುವಾಗ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸದೇ ಇದ್ದಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
5) ಟೆಂಡರ್‌ಗೆ ಸಂಬಂಧಪಟ್ಟ ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸುವುದು, ಯಾವುದೇ ಕಾರಣ ನೀಡದೆ ದರಪಟ್ಟಿಯನ್ನು ತಿರಸ್ಕರಿಸುವ ಅಥವಾ ಯಾವುದೇ ಕ್ಷಣದಲ್ಲಾದರೂ ರದ್ದು ಪಡಿಸುವ ಅಥವಾ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ರೀತಿಯ ಹಕ್ಕುಗಳನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

<u>ಅ) ಷರತ್ತುಗಳು ಕ್ರ.ಸಂ. 1ರ ಕಾಮಗಾರಿಗೆ</u>

1) ಸರಬರಾಜು ಮಾಡುವ ಸಾಮಗ್ರಿಗಳು ಷೆಡ್ಯೂಲ್–ಬಿ ನಲ್ಲಿ ನಮೂದಿರುವ ಕಂಪನಿಗಳದ್ದೆ ಆಗಿರಬೇಕು, ಹಾಗೂ ಐ.ಎಸ್.ಐ. ಮುದ್ರಿಕೆ ಹೊಂದಿರಬೇಕು,
2) ಸರಬರಾಜು ಮಾಡುವ ಸಾಮಗ್ರಿಗಳು ಎಲ್ಲಾ ತೆರಿಗೆಗಳನ್ನು ಒಳಗೊಂಡಿರತಕ್ಕದ್ದು, (ವ್ಯಾಟ್ ಸೇರಿ)

3) ಸರಬರಾಜು ಮಾಡುವ ಸಾಮಗ್ರಿಗಳು ಸರಬರಾಜು ಮಾಡುವಾಗ ಡ್ಯಾಮೇಜ್ ಆದಲ್ಲಿ ಬದಲಿ ಸಾಮಗ್ರಿಗಳನ್ನು ಕೊಡಬೇಕಾಗುತ್ತದೆ.
4) ಸಾಮಗ್ರಿಗಳನ್ನು ನಗರಸಭೆ ದಾಸ್ತಾನುವಿಗೆ ಸರಬರಾಜು ಮಾಡತಕ್ಕದ್ದು,
5) ಸಾಮಗ್ರಿಗಳನ್ನು ನಗರಸಭೆ ಅಗತ್ಯಕ್ಕೆ ತಕ್ಕಂತೆ ವಿಳಂಭ ಮಾಡದೇ ಸರಬರಾಜು ಮಾಡುವುದು.

**ಆ) ಷರತ್ತುಗಳು ಕ್ರ.ಸಂ.2ರ ಕಾಮಗಾರಿಗೆ**

1) ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆ ನೋಂದಾಯಿತ 3ನೇ ದರ್ಜೆ ಮೇಲ್ಪಟ್ಟು ಪರವಾನಗಿ ಹೊಂದಿರಬೇಕು,
2) ಪೈಪ್‌ಲೈನ್ ಮಣ್ಣು ಕಾಮಗಾರಿಯನ್ನು ಸಂಬಂಧಪಟ್ಟ ಅಭಿಯಂತರರು ಸೂಚಿಸುವ ರೀತಿಯಲ್ಲಿಯೇ ಮಾಡತಕ್ಕದ್ದು,
3) ಪೈಪ್‌ಲೈನ್ ಮಣ್ಣು ಕಾಮಗಾರಿ ನಿರ್ವಹಿಸುವ ಸಂದರ್ಭದಲ್ಲಿ ದೂರವಾಣಿ ಸಂಪರ್ಕದ ಕೇಬಲ್ ಹಾಗೂ ಇತರೆ ಆಸ್ತಿಪಾಸ್ತಿಗಳಿಗೆ ಹಾನಿಯಾದಲ್ಲಿ ನಗರಸಭೆಯು ಜವಾಬ್ದಾರಿಯಾಗಿರುವುದಿಲ್ಲ,
4) ಪೈಪ್ ಲೈನ್ ಮಣ್ಣು ಕಾಮಗಾರಿಯನ್ನು ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಪ್ರತಿ ಕಾಮಗಾರಿಯ ಪ್ರಾರಂಭ, ಪ್ರಗತಿ, ಮುಕ್ತಾಯದ ಹಂತದ ಪೋಟೋಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು,
5) ಪೈಪ್ ಲೈನ್ ಮಣ್ಣು ಕಾಮಗಾರಿಗಳ ಎರಡು ಕೆಲಸಗಳ ಪೈಕಿ ಒಬ್ಬರಿಗೆ ಒಂದಕ್ಕೆ ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ.

**ಇ) ಷರತ್ತುಗಳು ಕ್ರ.ಸಂ.3ರ ಕಾಮಗಾರಿಗೆ**

1) ಸಬ್ ಮರ್ಸಿಬಲ್ ಮೋಟಾರ್ ವೈಂಡಿಂಗ್ ಹಾಗೂ ಇಂಡೆಕ್ಷನ್ ಮೋಟಾರ್ ವೈಂಡಿಂಗ್ ಕಾಮಗಾರಿಗೆ ಮೂರು ತಿಂಗಳ ಸಾಮರ್ಥ್ಯದ ಅವಧಿ ನೀಡತಕ್ಕದ್ದು,
2) ರಿಪೇರಿ ಮಾಡುವ ಮೋಟಾರು ಪಂಪ್ ಹಾಗೂ ಸ್ಟಾರ್ಟರ್‌ಗಳಲ್ಲಿ ತೆಗೆದ ಹಾಳಾಗಿರುವ ಬಿಡಿಭಾಗಗಳನ್ನು ನಗರಸಭೆಗೆ ನೀಡುವುದು.
3) ಮೋಟಾರ್ ಪಂಪ್ ಸ್ಟಾರ್ಟರ್ ಹಾಗೂ ಇತರೆ ರಿಪೇರಿ ಕೆಲಸಗಳನ್ನು ಸಂಬಂಧಪಟ್ಟ ಅಭಿಯಂತರರ ಸಮ್ಮುಖದಲ್ಲೇ ಮಾಡತಕ್ಕದ್ದು.

**ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ತಾಂತ್ರಿಕ ವಿಭಾಗದಿಂದ ಪಡೆಯಬಹುದು.**

**ಸಹಿ:-**
**(ಜಿ.ರಾಮಕೃಷ್ಣ)**
**ಅಧ್ಯಕ್ಷರು,**
**ನಗರಸಭೆ, ದೊಡ್ಡಬಳ್ಳಾಪುರ.**

**ಸಹಿ:-**
**(ಎಂ.ಬಿ.ರಾಜೇಶ್ ಗೌಡ)** ಕೆ.ಎ.ಎಸ್.,
**ಉಪ ವಿಭಾಗಾಧಿಕಾರಿಗಳು/ ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**

## "ನಕಲು ಪ್ರತಿ"

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**